**ದಿನಾಂಕಃ 01-08-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರವಾಗಿ ಶ್ರೀ ಎಸ್.ಎನ್.ಎಂ., ವಕೀಲರಿಂದ**

ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುವುದಿಲ್ಲ. ವಾದಿ ನನ್ನ ಸ್ವಂತ ಅಣ್ಣ ಎಂದರೆ ಸರಿ. ನಾನು ಅಬ್ದುಲ್ ಜಲೀಲ್ ಸಾಬ್ ರವರ ಮಗ ಆದ ಅಬೀಬುಲ್ಲಾ ಎನ್ನುವವರನ್ನು ಮದುವೆಯಾಗಿರುತ್ತೇನೆ ಎಂದರೆ ಸರಿ. ಸದರಿ ಅಬ್ದುಲ್ ಜಲೀಲ್ ಸಾಬ್ ಪ್ರತಿವಾದಿಗಳ ಪೂರ್ವಿಕರಾಗಿರುತ್ತಾರೆ ಎಂದರೆ ಸರಿ. ಅಬ್ದುಲ್ ಜಲೀಲ್ ಸಾಬ್ ರವರಿಗೆ ಒಟ್ಟು 9 ಜನ ಮಕ್ಕಳು ಇದ್ದು ಇಬ್ಬರು ಗಂಡು ಮಕ್ಕಳು ಹಾಗೂ 7 ಜನ ಹೆಣ್ಣುಮಕ್ಕಳು ಇರುತ್ತಾರೆ. 1991 ನೇ ಸಾಲಿನಲ್ಲಿ ನನ್ನ ಮೈದುನ ಆದ ನೂರುಲ್ಲಾ ಭಾಷಾ ರವರ ವಿರುದ್ಧ ಓ.ಎಸ್. 93/1991 ರಂತೆ ದಾವೆ ಹೂಡಿರುತ್ತೇನೆ ಎಂದರೆ ಸರಿ. ನಾನು ಮದುವೆಯಾದ 10 ವರ್ಷಕ್ಕೆ ನನ್ನ ಗಂಡ ತೀರಿಕೊಂಡಿರುತ್ತಾರೆ. ನನ್ನ ಗಂಡ ತೀರಿಕೊಂಡ ನಂತರ ನಾನು ನನ್ನ ಮಾವನ ವಿರುದ್ಧ ನನ್ನ ಗಂಡನ ಭಾಗವನ್ನು ಕೊಡುವಂತೆ ದಾವೆ ಹೂಡಿರುತ್ತೇನೆ ಎಂದರೆ ಸರಿ. ಸದರಿ ದಾವೆ ಹೂಡಿದ ನಂತರ ಹೊಟ್ಟೆಬೊಮ್ಮನಹಳ್ಳಿಯ ತಿಮ್ಮಾರೆಡ್ಡಿ ರವರ ಮುಂದಾಳತ್ವದಲ್ಲಿ ಸದರಿ ಪ್ರಕರಣ ರಾಜೀಯಾಗಿದ್ದು ನನಗೆ 8 ಎಕರೆ 14 ಗುಂಟೆಯನ್ನು ನೀಡಿರುತ್ತಾರೆ ಎಂದರೆ ಸರಿ. ತದನಂತರ ಉಳಿಕೆ ಜಮೀನನ್ನು ಸಹಾ ನಾನೇ ಖರೀದಿ ಮಾಡುತ್ತೇನೆ ಎಂದು ನನ್ನ ಮಾವನ ವಿರುದ್ಧ ದಾವೆ ಹೂಡಿರುತ್ತೇನೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ದಾವಾ ಸ್ವತ್ತನ್ನು ಮಾರಾಟ ಮಾಡಬಾರದು ಎಂದು ಮಧ್ಯಂತರ ಅರ್ಜಿ ಸಲ್ಲಿಸಿದ್ದು ಸದರಿ ವಿಚಾರ ಮಾನ್ಯ ಉಚ್ಚ ನ್ಯಾಯಾಲಯದ ವರೆಗೂ ಹೋಗಿರುತ್ತದೆ ಎಂದರೆ ಸರಿ. ಸದರಿ ಪ್ರಕರಣ ಸಿವಿಲ್ ನ್ಯಾಯಾಲಯದಲ್ಲಿ ವಿಚಾರಣೆಯಾಗಿ ವಜಾ ಆಗಿರುತ್ತದೆ ಎಂದರೆ ಸರಿ. ಸಿವಿಲ್

ನ್ಯಾಯಾಲಯದ ಆದೇಶದ ಮೇರೆಗೆ ಮೇಲ್ಮನವಿಯನ್ನು ಸಹಾ ಸಲ್ಲಿಸಿರುತ್ತೇನೆ ಎಂದರೆ ಸಾಕ್ಷಿಯು ನಾವು ರಾಜೀ ಮಾಡಿಕೊಂಡಿರುತ್ತೇನೆ ಎಂದು ನುಡಿದಿರುತ್ತಾರೆ. ನನ್ನ ಮಾವ ತೀರಿಕೊಂಡು 5 ರಿಂದ 6 ವರ್ಷಗಳು ಆಗಿರುತ್ತವೆ. ನಾನು ಒಟ್ಟು 16 ರಿಂದ 17 ಎಕರೆಯ ಜಮೀನಿಗೆ ದಾವೆ ಹೂಡಿರುತ್ತೇನೆ. ನಾನು ಅಮರಾಪುರದಲ್ಲಿ ವಾಸವಾಗಿದ್ದೇನೆ ಎಂದರೆ ಸಾಕ್ಷಿಯು ಅಮರಾಪುರದಲ್ಲಿ ನನ್ನ ಮಾವನ ಮನೆ ಇರುತ್ತದೆ ಆದರೆ ನಾನು ಕ್ಯಾತಗಾನಹಳ್ಳಿಯಲ್ಲಿ ವಾಸವಾಗಿದ್ದೇನೆ ಎಂದು ನುಡಿದಿರುತ್ತಾರೆ. ನಾನು ಕ್ಯಾತಗಾನಹಳ್ಳಿಯಲ್ಲಿ ವಾಸವಾಗಿರುವುದಿಲ್ಲ ಅಮರಾಪುರದಲ್ಲೇ ವಾಸವಾಗಿರುತ್ತೇನೆ ನನ್ನ ಎಲ್ಲಾ ಗುರುತಿನ ಚೀಟಿಗಳನ್ನು ಸಹಾ ನಾನು ಅಮರಾಪುರದಲ್ಲಿ ವಾಸವಾಗಿದ್ದೇನೆ ಎಂದೇ ನಮೂದಾಗಿರುತ್ತದೆ ಎಂದರೆ ಸರಿಯಲ್ಲ.

ಕಳೆದ 35 ವರ್ಷಗಳಿಂದ ನನಗೂ, ವಾದಿ ಕುಟುಂಬದವರಿಗೂ ಹಾಗೂ ನನ್ನ ಮಾವ ಅಬ್ದುಲ್ ಜಲೀಲ್ ಸಾಬ್ ರವರ ಕುಟುಂಬದವರರ ನಡುವೆ ಮನಸ್ತಾಪ ಇರುತ್ತದೆ ಎಂದರೆ ಸರಿಯಲ್ಲ. ನೂರುಲ್ಲ ಭಾಷಾ ರವರು ಮಡಕಶಿರಾದಲ್ಲಿ ವಾಸವಾಗಿರುತ್ತಾರೆ. ಸದರಿ ನೂರುಲ್ಲಾ ಭಾಷಾ ರವರು ಬಸ್ ಕಂಡಕ್ಟರ್ ಆಗಿದ್ದು ಮಸೀದಿಯಲ್ಲೂ ಸಹಾ ಮೌಲ ಆಗಿ ಕೆಲಸ ಮಾಡುತ್ತಾರೆ ಎಂದರೆ ಸರಿ. ಅಬ್ದುಲ್ ಜಲೀಲ್ ಸಾಬ್ ರವರು 35 ವರ್ಷಗಳ ಕಾಲ ತನ್ನ ಮಗ ಆದ ನೂರುಲ್ಲಾ ಭಾಷಾ ರವರೊಂದಿಗೆ ವಾಸವಾಗಿದ್ದರು ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರೆದು ನಾನು, ನಮ್ಮ ಮಾವ ಹಾಗೂ ನೂರುಲ್ಲಾ ಭಾಷಾ ಎಲ್ಲರೂ ಕ್ಯಾತಗಾನಹಳ್ಳಿಯಲ್ಲೇ ವಾಸವಾಗಿದ್ದೇವು ಎಂದು ನುಡಿದಿರುತ್ತಾರೆ. ನಾನು, ಅಬ್ದುಲ್ ಖಾದರ್, ಹಾಗೂ ಅಬ್ದುಲ್ ಜಲೀಲ್ ಸಾಬ್ ರವರ ಮಕ್ಕಳು ಕ್ಯಾತಗಾನಹಳ್ಳಿಯಲ್ಲಿ ವಾಸವಾಗಿದ್ದೇವು ಎಂದು ತೋರಿಸಲು ದಾಖಲಾತಿಯನ್ನು ಹಾಜರುಪಡಿಸಿರುತ್ತೇನೆ. ಸದರಿ 16 ಎಕರೆ 28

ಗುಂಟೆಯಲ್ಲಿ 5 ಎಕರೆ ಮಾತ್ರ ನೀರಾವರಿ ಜಮೀನಾಗಿರುತ್ತದೆ ಉಳಿದ ಎಲ್ಲಾ ಜಮೀನು ಖುಷ್ಕಿ ಜಮೀನಾಗಿರುತ್ತದೆ. ದಾವಾ ಸರ್ವೇ ನಂಬರ್ ಪೈಕಿ 1 ಎಕರೆ ಜಮೀನು 1990 ರ ಸಮಯದಲ್ಲಿ 1 ಲಕ್ಷ ಬೆಲೆ ಬಾಳುತ್ತಿತ್ತು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ದಾವಾ ಸರ್ವೇ ನಂಬರ್ ಪೈಕಿ ನೀರಾವರಿ ಇರುವಂತಹ 1 ಎಕರೆ ಜಮೀನು 1990 ರ ಸಮಯದಲ್ಲಿ 5 ರಿಂದ 6 ಲಕ್ಷ ಬೆಲೆ ಬಾಳುತ್ತಿತ್ತು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ದಿನಾಂಕಃ 10.01.1992 ರಂದು ನನ್ನ ಮಾವ ನನ್ನ ಅಣ್ಣನಿಗೆ ಕ್ರಯದ ಕರಾರುಪತ್ರವನ್ನು ಬರೆದುಕೊಟ್ಟಿರುತ್ತಾರೆ. ನಾನು ಹುಟ್ಟಿದ ದಿನಾಂಕ ನನಗೆ ನೆನಪಿರುವುದಿಲ್ಲ. ಅಬ್ದುಲ್ ಜಲೀಲ್ ಸಾಬ್ ರವರು ಯಾವ ದಿನಾಂಕದಂದು ತೀರಿಕೊಂಡಿರುತ್ತಾರೆ ಎಂದು ನನಗೆ ನೆನಪಿರುವುದಿಲ್ಲ. ನನ್ನ ಮಗ ಕಕೀಬ್ ಉಲ್ಲಾ ರವರ ಜನ್ಮ ದಿನಾಂಕ ನನಗೆ ನೆನಪಿರುವುದಿಲ್ಲ. ನನ್ನ ಮಾವ ಸಾಲ ಮಾಡಿದ್ದ ಹಣವನ್ನು ತೀರಿಸುವ ಸಲುವಾಗಿ ಸದರಿ ಜಮೀನನ್ನು ನೀಡುವುದಾಗಿ ನನ್ನ ಅಣ್ಣನಿಗೆ ಕ್ರಯ ಕರಾರುಪತ್ರವನ್ನು ಬರೆದುಕೊಟ್ಟಿರುತ್ತಾರೆ. ನಾನು ಸದರಿ ಕ್ರಯದ ಕರಾರುಪತ್ರವನ್ನು ನೋಡಿರುತ್ತೇನೆ. ಸದರಿ ಕ್ರಯದ ಕರಾರುಪತ್ರವನ್ನು ಬಿಳಿ ಹಾಳೆಯ ಮೇಲೆ ಬರೆಯಲಾಗಿರುತ್ತದೆ.

(ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಪಾಟೀಸವಾಲಿಗೆ ಕಾಲವಕಾಶ ಕೋರಿದ್ದು, ನೀಡಿ ಮುಂದೂಡಲಾಯಿತು)

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ**

**ಎ.ಸಿ.ಜೆ., ಪಾವಗಡ.**